# ಸಾಂಸ್ಕೃತಿಕ ಕ್ಷೇತ್ರಕ್ಕೆ ಕನ್ನಡಿಗರ ಕೊಡುಗೆಗಳು

**ಪ್ರವೀಣ ಚಿತ್ರಗಾರ***

DOI: https://doi.org/10.5281/zenodo.21253165

**ABSTRACT**

ಭಾರತೀಯ ಸಂಸ್ಕೃತಿಯ ವಿಕಸನದಲ್ಲಿ ಕನ್ನಡ ನಾಡಿನ ಕೊಡುಗೆ ಅನನ್ಯವಾಗಿದೆ. ಪ್ರಾಚೀನ ಕಾಲದಿಂದಲೂ ಕರ್ನಾಟಕವು ಸಾಹಿತ್ಯ, ಕಲೆ, ಸಂಗೀತ, ಮತ್ತು ರಂಗಭೂಮಿ ಕ್ಷೇತ್ರಗಳಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ದೇಶದಲ್ಲೇ ಅತಿ ಹೆಚ್ಚು (ಎಂಟು) ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದ ಸಾಹಿತ್ಯದ ಹಿರಿಮೆಯಿಂದ ಹಿಡಿದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದ ನಾಟಕ ಮತ್ತು ಚಲನಚಿತ್ರಗಳವರೆಗೆ ಕನ್ನಡಿಗರ ಸಾಧನೆ ಅಪಾರ. ಕರ್ನಾಟಕ ಮತ್ತು ಹಿಂದುಸ್ತಾನಿ ಸಂಗೀತ ಪರಂಪರೆಗಳೆರಡಕ್ಕೂ ಶ್ರೇಷ್ಠ ದಿಗ್ಗಜರನ್ನು ನೀಡಿದ ಕೀರ್ತಿ ನಮ್ಮದು. ಜನಪದ ಸಾಹಿತ್ಯ, ವಾಸ್ತುಶಿಲ್ಪದ ಭವ್ಯತೆ, ಚಿತ್ರಕಲೆ ಹಾಗೂ ನೃತ್ಯ ಪ್ರಕಾರಗಳಲ್ಲಿನ ಕನ್ನಡಿಗರ ಪರಿಣತಿಯು ನಾಡಿನ ಕಲಾಶ್ರೀಮಂತಿಕೆಯನ್ನು ಬಿಂಬಿಸುತ್ತವೆ. ಒಟ್ಟಾರೆಯಾಗಿ, ಸಾಹಿತ್ಯದಿಂದ ಹಿಡಿದು ಸಿನೆಮಾವರೆಗಿನ ವಿವಿಧ ಆಯಾಮಗಳಲ್ಲಿ ಕನ್ನಡಿಗರು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೀರಿದ ಪ್ರಭಾವ, ಪಡೆದ ಮನ್ನಣೆ ಮತ್ತು ನಿರ್ಮಿಸಿದ ಸಾಂಸ್ಕೃತಿಕ ಮೈಲಿಗಲ್ಲುಗಳ ಸಮಗ್ರ ದರ್ಶನ ಇಲ್ಲಿದೆ.

**KEYWORDS:** ಸಾಂಸ್ಕೃತಿಕ ಪರಂಪರೆ, ಕನ್ನಡ ಸಾಹಿತ್ಯ, ಭಾರತೀಯ ಸಂಗೀತ, ಜಾನಪದ ಲೋಕ, ರಂಗಭೂಮಿ ಮತ್ತು ಚಿತ್ರರಂಗ.

* **ಡಾ. ಪ್ರವೀಣ ಚಿತ್ರಗಾರ,** ಸಹಾಯಕ ಪ್ರಾಧ್ಯಾಪಕರು, ಶ್ರೀ ಎಚ್. ಆರ್. ಶ್ರೀರಾಮುಲು ಸ್ಮಾರಕ ಕಾಲೇಜು, ಗಂಗಾವತಿ.

ಪ್ರಾಚೀನ ಕಾಲದಿಂದಲೂ ಕನ್ನಡನಾಡು ಶ್ರೀಮಂತ, ವಿಶಾಲ ಮತ್ತು ವಿಭಿನ್ನ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ಭಾರತೀಯ ಸಂಸ್ಕೃತಿಯ ವಿಕಸನದಲ್ಲಿ ಕರ್ನಾಟಕದ ಪಾತ್ರ ಮಹತ್ವದ್ದಾಗಿದೆ. ಸಾಹಿತ್ಯ, ಶಿಕ್ಷಣ, ಸಂಗೀತ, ನೃತ್ಯ, ಮೂರ್ತಿಕಲೆ, ಶಿಲ್ಪಕಲೆ, ವಾಸ್ತುಶಿಲ್ಪ ಮುಂತಾದ ಕ್ಷೇತ್ರಗಳಲ್ಲಿ ಕನ್ನಡಿಗರ ಸಂಸ್ಕೃತಿಯ ಹೆಗ್ಗುರುತುಗಳು ಅನಾವರಣಗೊಂಡಿವೆ.

**ಸಾಹಿತ್ಯ:**

ಕನ್ನಡದ ಸಾಹಿತಿಗಳು ತಮ್ಮ ಪಾಂಡಿತ್ಯ, ಕೌಶಲ್ಯ, ಅಧ್ಯಯನ ಮತ್ತು ಪರಿಶ್ರಮದಿಂದ ಮೇರು ಕೃತಿಗಳನ್ನು ರಚಿಸಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಕಂಪನ್ನು ಪಸರಿಸಿದ್ದಾರೆ. ಇಡೀ ರಾಷ್ಟ್ರದಲ್ಲಿ 8 ಜನ ಕನ್ನಡ ಸಾಹಿತಿಗಳು ರಾಷ್ಟ್ರಮಟ್ಟದ ಜ್ಞಾನಪೀಠ ಪ್ರಶಸ್ತಿಗೆ ಪಾತ್ರರಾದ ಹೆಗ್ಗಳಿಕೆ ಕನ್ನಡಿಗರದಾಗಿದೆ. ಅನೇಕ ಕನ್ನಡ ಸಾಹಿತಿಗಳು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. (ವಿವರಗಳಿಗಾಗಿ ಅನುಬಂಧ ನೋಡಿರಿ). ಯು.ಆರ್. ಅನಂತಮೂರ್ತಿ, ಎಸ್.ಎಲ್.ಭೈರಪ್ಪನವರ ಕಾದಂಬರಿಗಳು ಭಾರತೀಯ ಮತ್ತು ವಿದೇಶೀಯ ಭಾಷೆಗಳಲ್ಲಿ ಅನುವಾದಗೊಂಡಿವೆ. ವಿ.ಕೃ.ಗೋಕಾಕ್ ಮತ್ತು ಯು.ಆರ್. ಅನಂತಮೂರ್ತಿಯವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಬಿ.ವಿ.ಕಾರಂತ ಮತ್ತು ಚಂದ್ರಶೇಖರ್ ಕಂಬಾರ ಅವರು ನಾಟಕ ರಂಗದಲ್ಲಿ ರಾಷ್ಟ್ರಮಟ್ಟದಲ್ಲಿ ಜನಪ್ರಿಯರಾಗಿದ್ದಾರೆ. ಬಿ.ವಿ.ಕಾರಂತರು ಅಖಿಲ ಭಾರತ ನಾಟಕ ಅಕಾಡೆಮಿಯ ನಿರ್ದೇಶಕರಾಗಿ ಅನುಪಮ ಸೇವೆ ಸಲ್ಲಿಸಿದ್ದಾರೆ. ಚಂದ್ರಶೇಖರ್ ಕಂಬಾರ ಅವರು ಮಧ್ಯಪ್ರದೇಶದ ಭೋಪಾಲನ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ವ್ಯಂಗ್ಯ ಚಿತ್ರಕಲಾವಿದರಾದ ಆರ್.ಕೆ. ಲಕ್ಷ್ಮಣ್ ಅವರ ವ್ಯಂಗ್ಯ ಚಿತ್ರಗಳು ಮತ್ತು ಅವರ ಸಹೋದರರಾದ ಆರ್.ಕೆ. ನಾರಾಯಣ್ ಅವರು ಆಂಗ್ಲ ಕಾದಂಬರಿಗಳು ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕನ್ನಡಿಗರಿಗೆ ಕೀರ್ತಿಯನ್ನು ತಂದಿವೆ. ಇನ್ನೊಬ್ಬ ಕನ್ನಡಿಗ ವ್ಯಂಗ್ಯ ಚಿತ್ರಕಲಾವಿದ ಬಿ.ಜಿ.ಗುಜ್ಜಾರಪ್ಪ ಕೊರಿಯಾದಲ್ಲಿ ನಡೆದ ಅಂತರರಾಷ್ಟ್ರೀಯ ವ್ಯಂಗ್ಯ ಚಿತ್ರಗಳ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದು ರಾಷ್ಟ್ರ ಮತ್ತು ರಾಜ್ಯಕ್ಕೆ ಗೌರವ ತಂದಿದ್ದಾರೆ.

ಕರ್ನಾಟಕದ ಸುಪುತ್ರಿಯಾದ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಕನ್ನಡ ನಾಡು ಮತ್ತು ದೇಶಕ್ಕೆ ಸಲ್ಲಿಸಿದ ಸೇವೆ ಸ್ಮರಣೀಯವಾಗಿದೆ. ಇವರು ಸೆಂಟ್ರಲ್ ಹ್ಯಾಂಡಿ ಕ್ರಾಫ್ಟ್ ಬೋರ್ಡ್ ಮತ್ತು ಸಂಗೀತ ನಾಟಕ ಅಕಾಡೆಮಿಗಳ ಅಧ್ಯಕ್ಷರಾಗಿದ್ದು ಮಹಿಳೆಯರ ಶ್ರೇಯೋಭಿವೃದ್ಧಿಗಾಗಿ ಸಲ್ಲಿಸಿದ ಸೇವೆ ಮಹತ್ತರವಾಗಿದೆ. ಇವರ ನಿಸ್ವಾರ್ಥ ಸೇವೆಯನ್ನು ಪರಿಗಣಿಸಿ ಫಿಲಿಪೈನ್ಸ್ ದೇಶದ ಪ್ರತಿಷ್ಠಿತ 'ಮ್ಯಾಗ್ಸೆಸೆ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಈ ಸಾಧನೆಯ ಸಂಕೇತವಾಗಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಹೆಸರಿನಲ್ಲಿ ಭಾರತ ಸರ್ಕಾರವು ರಾಷ್ಟ್ರಮಟ್ಟದ ನಾಟಕ ಪ್ರಶಸ್ತಿಯನ್ನು ನೀಡುತ್ತಿದೆ.

**ಜಾನಪದ ಕ್ಷೇತ್ರಕ್ಕೆ ಕನ್ನಡಿಗರ ಕೊಡುಗೆ:**

ಜನಪದರ ಜ್ಞಾನವೇ ಜಾನಪದವಾಗಿದೆ. ಕಾಲಕಾಲಾಂತರದಿಂದ ಮಾನವನ ಬದುಕಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿ ಮೌಖಿಕವಾಗಿ ಮೂಡಿ ಬಂದ ಜಾನಪದ ಸಾಹಿತ್ಯಕ್ಕೆ ಕನ್ನಡಿಗರ ಕೊಡುಗೆ ಮಹತ್ತರವಾಗಿದೆ. ಹಾ.ಮಾ. ನಾಯಕ, ಸಿಂಪಿ ಲಿಂಗಣ್ಣ, ವಿ.ಕೆ.ರಾಮಾನುಜನ್, ಡಾ. ಪರಮ ಶಿವಯ್ಯ, ಎಲ್.ಆರ್.ಹೆಗಡೆ, ಹರಿದಾಸ್ ಭಟ್, ಬಿ.ಬಿ. ಹೆಂಡಿ, ಎಂ.ಜಿ. ಬಿರಾದಾರ್, ಎಂ.ಎಸ್.ಲತ, ಗೊ.ರು. ಚನ್ನಬಸಪ್ಪ

ಮುಂತಾದವರು ಕನ್ನಡ ಜನಪದ ಕ್ಷೇತ್ರದಲ್ಲಿ ಮಹೋನ್ನತ ಸಾಧನೆಗಳನ್ನು ಮಾಡಿದ್ದಾರೆ. ಎಚ್.ಎಲ್.ನಾಗೇಗೌಡರು ನಿವೃತ್ತಿಯ ನಂತರ ಸಂಪೂರ್ಣವಾಗಿ ತಮ್ಮನ್ನು ಜಾನಪದ ಲೋಕಕ್ಕೆ ಸಮರ್ಪಿಸಿಕೊಂಡರು. ಎಚ್.ಎಲ್.ನಾಗೇಗೌಡ ಟ್ರಸ್ಟನ್ನು ಸ್ಥಾಪಿಸಿದರು. ಇದು ಮುಂದೆ "ಕರ್ನಾಟಕ ಜಾನಪದ ಪರಿಷತ್ತು" ಎಂದು ನಾಮಕರಣ ಹೊಂದಿತು. ಮೈಸೂರು ರಸ್ತೆಯಲ್ಲಿರುವ ವಿಶಾಲವಾದ ಪ್ರದೇಶದಲ್ಲಿ ಜಾನಪದ ಲೋಕವನ್ನು ಸೃಷ್ಟಿಸಿದ ಕೀರ್ತಿ ಇವರದಾಗಿದೆ. ಜನಪದ ಸಾಹಿತ್ಯ, ಚಿತ್ರಕಲೆ, ಮೂರ್ತಿಕಲೆ, ಲಲಿತಕಲೆ, ನಾಟಕ, ಸಂಗೀತ, ನೃತ್ಯ ಮುಂತಾದವುಗಳನ್ನು ಇಲ್ಲಿ ಅನಾವರಣಗೊಳಿಸಲಾಗಿದೆ. ಇಡೀ ರಾಜ್ಯದಲ್ಲಿ ಜನಪದ ಲೋಕವನ್ನು ಸ್ಥಾಪಿಸಿದ ಕೀರ್ತಿ ಇವರದಾಗಿದೆ. ಚಂದ್ರಶೇಖರ ಕಂಬಾರ ಅವರು ತಮ್ಮ ವಿಶಿಷ್ಟ ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಜನಪ್ರಿಯತೆ ಪಡೆದಿದ್ದಾರೆ.

ಡಾ. ಜಿ.ಎಸ್.ಆಮೂರ ಅವರು ಖ್ಯಾತ ವಿಮರ್ಶಕರಾಗಿದ್ದು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. ಪ್ರಸಿದ್ಧ ಕನ್ನಡ ಕಾದಂಬರಿಕಾರರಾದ ಧು.ನಿಂ. ಬೆಳಗಲಿ ಮತ್ತು ಡಾ.ಅರವಿಂದ ಮಾಲಗತ್ತಿಯವರಿಗೆ ನವದೆಹಲಿಯ ಭಾರತೀಯ ದಲಿತ ಸಾಹಿತ್ಯ ಅಕಾಡೆಮಿಯು ಡಾ. ಬಿ.ಆರ್. ಅಂಬೇಡ್ಕರ್ ಫೆಲೋಶಿಪ್ ಪ್ರಶಸ್ತಿ ನೀಡಿ ಗೌರವಿಸಿದೆ. ಕೆ.ವಿ.ಪುಟ್ಟಪ್ಪ, ದ.ರಾ.ಬೇಂದ್ರೆ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಶಿವರಾಮ ಕಾರಂತ, ಗಿರೀಶ್ ಕಾರ್ನಾಡ್, ಚಂದ್ರಶೇಖರ್ ಕಂಬಾರ, ಮುಂತಾದವರು ಕನ್ನಡ ಸಾಹಿತ್ಯ ಸಿಹಿಯನ್ನು ದೇಶ ವಿದೇಶಗಳಲ್ಲಿ ಹರಡಿಸಿದ್ದಾರೆ.

**ಸಂಗೀತ:**

ಸಂಗೀತ ಕಲಾ ಕ್ಷೇತ್ರಕ್ಕೆ ಕನ್ನಡಿಗರ ಕೊಡುಗೆ ಅತ್ಯಮೂಲ್ಯವಾಗಿದೆ. ಭಾರತೀಯ ಸಂಗೀತ ಪರಂಪರೆಯಲ್ಲಿ ಹಿಂದುಸ್ತಾನಿ ಮತ್ತು ಕರ್ನಾಟಕ ಸಂಗೀತ ಎಂಬ ಎರಡು ಪ್ರಕಾರಗಳಿವೆ. ಈ ಎರಡು ಪ್ರಕಾರಗಳು ಕರ್ನಾಟಕದಲ್ಲಿ ಜನಪ್ರಿಯವಾಗಿವೆ. ಪುರಂದರದಾಸರನ್ನು ಕರ್ನಾಟಕ ಸಂಗೀತ ಪಿತಾಮಹರೆಂದು ಕರೆಯಲಾಗಿದೆ. ಜಯಚಾಮರಾಜ ಒಡೆಯರು ಕರ್ನಾಟಕ ಸಂಗೀತಕ್ಕೆ ಸಂಬಂಧಿಸಿದ 94 ಕೃತಿಗಳನ್ನು ಬರೆದಿದ್ದಾರೆ. ಮೈಸೂರು ಒಡೆಯರ ಕಾಲವು ಕರ್ನಾಟಕ ಸಂಗೀತದ ಸುವರ್ಣಯುಗವಾಗಿತ್ತು. ಮೈಸೂರಿನ ಸದಾಶಿವರಾಯ, ವೀಣೆ ಶೇಷಣ್ಣ, ವೀಣೆ ಸುಬ್ಬಣ್ಣ, ನಾಗರತ್ನಮ್ಮ, ಬಿ. ದೇವೇಂದ್ರಪ್ಪ, ಮುಂತಾದವರು ಖ್ಯಾತ ಕಲಾವಿದರಾಗಿದ್ದರು.

ಮಲ್ಲಿಕಾರ್ಜುನ ಮನ್ಸೂರ, ಗಂಗೂಬಾಯಿ ಹಾನಗಲ್, ಭೀಮಸೇನ ಜೋಶಿ, ಕುಮಾರ ಗಂಧರ್ವ, ಬಸವರಾಜ ರಾಜಗುರು, ಪುಟ್ಟರಾಜ ಗವಾಯಿ, ಕೃಷ್ಣಾ ಬಾಯಿ ರಾಮದುರ್ಗ, ಅರ್ಜುನಸಾ ನಾಕೋಡ, ಶ್ಯಾಮಲಾಜಿ ಭಾವೆ, ಸಿದ್ದರಾಮ ಜಂಬಲದಿನ್ನಿ, ಸಂಗಮೇಶ್ವರ ಗುರವ, ಫಕೀರಪ್ಪ ಗವಾಯಿ ಮುಂತಾದವರು ಪ್ರಸಿದ್ಧ ಕಲಾ ತಪಸ್ವಿಗಳಾಗಿದ್ದರು. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಂಗೀತಕ್ಕೆ ಶ್ರೇಷ್ಠ ಸ್ಥಾನ ತಂದುಕೊಟ್ಟ ಕೀರ್ತಿ ಇವರದಾಗಿದೆ.

ಪಿ. ಕಾಳಿಂಗರಾವ್, ಮೈಸೂರು ಅನಂತಸ್ವಾಮಿ, ಎಚ್.ಆರ್. ಲೀಲಾವತಿ, ಶಿವಮೊಗ್ಗ ಸುಬ್ಬಣ್ಣ, ಮಾಲತಿ ಶರ್ಮಾ, ಬಿ.ಆರ್. ಛಾಯಾ, ಬಿ.ಕೆ. ಸುಮಿತ್ರಾ, ಯಶವಂತ ಹಳಬಂಡಿ, ಸಂಗೀತಾ ಕಟ್ಟಿ, ಮುಂತಾದವರು ಸುಗಮ ಸಂಗೀತದಲ್ಲಿ ಮಹತ್ತರ ಸಾಧನೆ ಮಾಡಿದ್ದಾರೆ.

**ನೃತ್ಯ:**

ನೃತ್ಯ ಕಲಾ ಕ್ಷೇತ್ರಕ್ಕೆ ಕನ್ನಡಿಗರ ಕೊಡುಗೆ ಅನುಪಮವಾಗಿದೆ. ಸಾಹಿತ್ಯ ಕೃತಿಗಳು,

ಶಾಸನಗಳು, ಮೂರ್ತಿಶಿಲ್ಪಗಳು ನೃತ್ಯ ಕಲೆಯ ಬಗ್ಗೆ ಮಾಹಿತಿ ನೀಡುತ್ತವೆ. 6ನೆಯ ವಿಕ್ರಮಾದಿತ್ಯನ ರಾಣಿ ಚಾಂದಲದೇವಿಯು ಅಭಿನವ ಸರಸ್ವತಿ ಎಂಬ ಬಿರುದನ್ನು ಹೊಂದಿದ್ದಳು. ಹೊಯ್ಸಳ ವಿಷ್ಣು ವರ್ಧನನ ರಾಣಿ ಶಾಂತಲೆಯು ನೃತ್ಯ ಪರಿಣಿತಳಾಗಿದ್ದಳು. ವಿಜಯನಗರ ಮತ್ತು ಮೈಸೂರು ಅರಸರು ನೃತ್ಯ ಕಲೆಯನ್ನು ಪ್ರೋತ್ಸಾಹಿಸಿದರು. ನೃತ್ಯ ಪರಿಣಿತರಾದ ಬ್ರಾಹ್ಮಣ ಗುರುಗಳು ದೇವ ದಾಸಿಯರಿಗೆ ನೃತ್ಯವನ್ನು ಕಲಿಸುತ್ತಿದ್ದರು. ಕಾಶಿ ಗುರು, ಅಮೃತಪ್ಪ, ಅಪ್ಪಯ್ಯ, ದಾಸಪ್ಪ ಜೆಟ್ಟಿ, ತಾಯಮ್ಮ, ಮುಂತಾದವರು ಭರತನಾಟ್ಯ ಗುರುಗಳಾಗಿದ್ದರು. ವೆಂಕಟ ಲಕ್ಷ್ಮಮ್ಮ, ತ್ರಿಪುರ ಸುಂದರಮ್ಮ, ರಮಾಮಣಿಯವರು ಭರತನಾಟ್ಯ ಕಲಾವಿದರಾಗಿದ್ದರು.

ಬೆಂಗಳೂರು ಭರತ ನಾಟ್ಯದ ಮುಖ್ಯ ಕೇಂದ್ರವಾಗಿತ್ತು. 1930–1940 ರ ಅವಧಿಯಲ್ಲಿ ಇ.ಕೃಷ್ಣ ಅಯ್ಯರ್, ರುಕ್ಮಿಣಿ ಅರುಂಡೇಲ್, ರಾಮಗೋಪಾಲ್, ಯು.ಎಸ್. ಕೃಷ್ಣರಾವ್ ಮತ್ತು ಅವರ ಪತ್ನಿ ಚಂದ್ರಭಾಗದೇವಿಯರ ಪ್ರಯತ್ನದ ಫಲವಾಗಿ ಭರತ ನಾಟ್ಯ ಕಲೆಯು ಜನಪ್ರಿಯವಾಗತೊಡಗಿತು. 1950 ರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೃತ್ಯ ನಾಟಕ ಸಂಗೀತ ಅಕಾಡೆಮಿಗಳನ್ನು ಸ್ಥಾಪಿಸಿದ್ದರಿಂದ ನೃತ್ಯ ಕಲಾವಿದರ ಸಂಖ್ಯೆ ಬೆಳೆದಿದೆ. ಭರತನಾಟ್ಯದಲ್ಲಿ ಕೆ.ಆರ್.ಎಸ್. ಪ್ರಸನ್ನ, ಎ.ಆರ್.ಶ್ರೀಧರ್, ರಾಮು, ಅರುಣ ಮುಂತಾದವರು ಕರ್ನಾಟಕಕ್ಕೆ ಅಂತರರಾಷ್ಟ್ರೀಯ ಜನಪ್ರಿಯತೆಯನ್ನು ತಂದಿದ್ದಾರೆ.

**ವಾಸ್ತು ಶಿಲ್ಪ, ಮೂರ್ತಿ ಶಿಲ್ಪ:**

ಭಾರತೀಯ ವಾಸ್ತು ಶಿಲ್ಪ, ಶಿಲ್ಪಕಲೆ ಮತ್ತು ಚಿತ್ರಕಲಾ ಕ್ಷೇತ್ರಕ್ಕೆ ಕನ್ನಡಿಗರ ಕೊಡುಗೆಯು ಅತ್ಯಮೂಲ್ಯವಾಗಿದೆ. ಚಾಲುಕ್ಯ, ರಾಷ್ಟ್ರ ಕೂಟ, ಹೊಯ್ಸಳ, ವಿಜಯನಗರ ಮತ್ತು ಮೈಸೂರು ಅರಸರ ಕಾಲದಲ್ಲಿ ನಿರ್ಮಿಸಲಾದ ದೇವಾಲಯಗಳು, ಅರಮನೆಗಳು, ಕೋಟೆಗಳು ಮಸೀದಿ, ಚರ್ಚುಗಳು ಕರ್ನಾಟಕದ ಕಲಾ ವೈಭವದ ಪ್ರತಿಬಿಂಬಗಳಾಗಿವೆ. ಆಂಗ್ಲರ ಆಗಮನದ ನಂತರ ಬೆಂಗಳೂರು, ಮೈಸೂರು, ಮಂಗಳೂರು, ಬಳ್ಳಾರಿ, ಮಡಿಕೇರಿಗಳಲ್ಲಿ ಪಾಶ್ಚಾತ್ಯ ಪ್ರಭಾವದ ಕಟ್ಟಡಗಳು ನಿರ್ಮಾಣಗೊಂಡವು. ಶಿಲ್ಪಕಲೆಯಲ್ಲಿ ವೆಂಕಟಾಚಲಪತಿ ಮತ್ತು ನಾರಾಯಣ ಕುಲಕರ್ಣಿಯವರು ಜನಪ್ರಿಯರಾಗಿದ್ದಾರೆ. ವೆಂಕಟಚಲಾಪತಿಯವರ ಸೂರ್ಯದೇವ (ಕಂಚಿನ ಮೂರ್ತಿ) ರಾಹುಕೇತು (ಶಿಲೆ) ಯುಸೂಫ್ ಅರಕ್ಕಾಲರ ಬರಗಾಲದ ಹಸುವಿನ ಮುಖಗಳು, ಪುಷ್ಪಮಾಲಾ ಅವರ ಸುಡಾವೆ ಮಣ್ಣಿನ ಹಂದಿಗಳು, ಎಲ್.ಪಿ. ಅಂಚನರ ಭೂತಾರಾಧನೆಯ ಮುಖವಾಡ ಮುಂತಾದವು ರಾಷ್ಟ್ರ ಮಟ್ಟದಲ್ಲಿ ಜನಪ್ರಿಯವಾಗಿವೆ.

**ಚಿತ್ರಕಲೆ:**

ಭಾರತೀಯ ಚಿತ್ರಕಲಾ ಇತಿಹಾಸದಲ್ಲಿ ಕೆ. ವೆಂಕಟಪ್ಪನವರ ಹೆಸರು ಅಜರಾಮರವಾಗಿದೆ. ಕೆ.ಕೆ. ಹೆಬ್ಬಾರ್, ಎಸ್.ಜಿ. ವಾಸುದೇವ, ಎಸ್.ನಂಜುಂಡ, ವಿ.ಜಿ. ಅಂದಾನಿ, ಎನ್.ಹನುಮಂತಯ್ಯ, ವಿಜಯ ಹಾಗರಗುಂಡಗಿ, ಮನೋಳಿ ಖಂಡೇರಾವ ಮುಂತಾದವರು ಚಿತ್ರಕಲೆಯಲ್ಲಿ ಕನ್ನಡ ನಾಡಿಗೆ ದೊಡ್ಡ ಕೀರ್ತಿಯನ್ನು ತಂದಿದ್ದಾರೆ. ಬೆಂಗಳೂರಿನ ಯುವ ಚಿತ್ರ ಕಲಾವಿದ ಶ್ರೀನಿವಾಸ ವರ್ಮಾ ಅವರು ಚಿತ್ರ ಗಾರುಡಿಗನೆಂದು ಜನಪ್ರಿಯರಾಗಿದ್ದಾರೆ. ಸುರಪುರದ ಗರುಡಾದ್ರಿ ಚಿತ್ರಕಲೆಯು ಅಂತರರಾಷ್ಟ್ರೀಯ ಖ್ಯಾತಿ ಪಡೆಯಲು ವಿಜಯ ಹಾಗರಗುಂಡಗಿಯವರ ಪಾತ್ರ ಮಹತ್ವದ್ದಾಗಿದೆ.

**ರಂಗಭೂಮಿ (ನಾಟಕ):**

ಕನ್ನಡ ನಾಟಕ ರಂಗದಲ್ಲಿ ಟಿ.ಪಿ. ಕೈಲಾಸಂ, ಶ್ರೀರಂಗ, ಗಿರೀಶ್ ಕಾರ್ನಾಡ್, ಚಂದ್ರಶೇಖರ್ ಕಂಬಾರ, ಚಂಪಾ, ಪಿ.ಲಂಕೇಶ್, ಕೈವಾರ್ ರಾಜಾರಾವ್, ಮುಂತಾದವರ ಕೊಡುಗೆ ಅತ್ಯಮೂಲ್ಯವಾಗಿದೆ. ಶ್ರೀರಂಗರನ್ನು ನಾಟಕ ಕ್ಷೇತ್ರದ ಹರಿಕಾರರೆಂದು ಕರೆಯಲಾಗಿದೆ. ಕಂಬಾರರ ಜೋಕುಮಾರಸ್ವಾಮಿ, ಸಂಗ್ಯಾಬಾಳ್ಯ, ಕಾಡುಕುದುರೆ, ಗಿರೀಶ್ ಕಾರ್ನಾಡರ ಯಯಾತಿ, ತುಘಲಕ್ ನಾಟಕಗಳು ನಾಟಕ ರಂಗದಲ್ಲಿ ಹೊಸ ಅಲೆಯನ್ನು ಸೃಷ್ಟಿಸಿದವು. 1986 ರಲ್ಲಿ ಸಿ.ಆರ್.ಸಿಂಹ ಅವರ "ಟಿಪಿಕಲ್ ಟಿ.ಪಿ. ಕೈಲಾಸಂ" ಎಂಬ ನಾಟಕವು ಅಮೆರಿಕಾ ಮತ್ತು ಕೆನಡಾ ದೇಶಗಳಲ್ಲಿ 16 ಪ್ರದರ್ಶನಗಳನ್ನು ಪ್ರಯೋಗಿಸಿದೆ. ವಿದೇಶಗಳಲ್ಲಿ ಪ್ರಯೋಗ ನಡೆಸಿದ ಪ್ರಥಮ ಕನ್ನಡ ನಾಟಕ ಎಂಬ ಕೀರ್ತಿಗೆ ಪಾತ್ರವಾಗಿದೆ. ಬಿ.ಜಯಶ್ರೀಯವರು "ಲಕ್ಷಾಪತಿ-ರಾಜನ ಕಥೆ" ಎಂಬ ನಾಟಕವನ್ನು ಈಜಿಪ್ಟ್ ಮತ್ತು ಬಲ್ಗೇರಿಯಾಗಳಲ್ಲಿ ಪ್ರದರ್ಶನಗೊಳಿಸಿದ್ದಾರೆ. ಕನ್ನಡ ಚಲನಚಿತ್ರಕ್ಕೆ ಮಹಾನ್ ನಟರನ್ನು ನೀಡಿದ ಕೊಡುಗೆ ಕನ್ನಡ ರಂಗಭೂಮಿಯದ್ದಾಗಿದೆ.

**ಕನ್ನಡ ಚಲನ ಚಿತ್ರರಂಗ:**

ಕನ್ನಡ ಚಲನಚಿತ್ರರಂಗವು ದೇಶ ವಿದೇಶಗಳಲ್ಲಿ ಅತ್ಯಮೂಲ್ಯ ಕೊಡುಗೆಗಳನ್ನು ನೀಡಿದೆ. 1996 ರಲ್ಲಿ ಡಾ. ರಾಜ್‌ಕುಮಾರ್ ಅವರಿಗೆ ರಾಷ್ಟ್ರಮಟ್ಟದ ಪ್ರತಿಷ್ಠಿತ 'ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ' ನೀಡಿ ಗೌರವಿಸಿರುವುದು ಕನ್ನಡ ಚಲನಚಿತ್ರ ರಂಗವು ಭಾರತೀಯ ಚಲನಚಿತ್ರಕ್ಕೆ ನೀಡಿದ ಕೊಡುಗೆಯ ದ್ಯೋತಕವಾಗಿದೆ. ಜಿ.ವಿ. ಅಯ್ಯರ್ ಅವರು ಕನ್ನಡದ ಖ್ಯಾತ ನಿರ್ದೇಶಕರಾಗಿದ್ದು, ಸಂಸ್ಕೃತದಲ್ಲಿ ಪ್ರಥಮಬಾರಿಗೆ 'ಶ್ರೀ ಶಂಕರಾಚಾರ್ಯ', 'ಶ್ರೀ ಮಧ್ವಾಚಾರ್ಯ' ಮತ್ತು 'ಭಗವದ್ಗೀತೆ' ಚಲನಚಿತ್ರಗಳನ್ನು ತಯಾರಿಸಿದ್ದಾರೆ. ಗಿರೀಶ್ ಕಾರ್ನಾಡ್‌ರು ಕನ್ನಡ ಸಾಹಿತ್ಯ, ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾಗಿದೆ. 1998 ರಲ್ಲಿ ಇವರಿಗೆ 'ಜ್ಞಾನಪೀಠ' ಪ್ರಶಸ್ತಿ ನೀಡಲಾಗಿದೆ. ಇವರು ರಚಿಸಿ ನಿರ್ದೇಶಿಸಿದ ಯಯಾತಿ, ತುಘಲಕ್, ತಲೆದಂಡ ನಾಟಕಗಳು ಅಂತರರಾಷ್ಟ್ರೀಯ ಖ್ಯಾತಿ ಪಡೆದಿವೆ. ಸ್ಕೂಲ್ ಮಾಸ್ಟರ್, ನಾಗಮಂಡಲ, ಸಂಸ್ಕಾರ, ತಾಯಿಸಾಹೇಬ್ ಮುಂತಾದ ಕನ್ನಡ ಚಲನಚಿತ್ರಗಳು ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡಿವೆ. ಬಿ.ಆರ್. ಪಂತುಲು, ಆರ್. ನಾಗೇಂದ್ರರಾವ್, ಬಿ.ಎಸ್. ರಂಗಾ, ಪುಟ್ಟಣ್ಣ ಕಣಗಾಲ್, ಶಂಕರ್‌ನಾಗ್, ಟಿ. ನಾಗಾಭರಣ, ರವಿಚಂದ್ರನ್, ಬರಗೂರು ರಾಮಚಂದ್ರಪ್ಪ, ಡಾ. ಪಾರ್ವತಮ್ಮ ರಾಜ್‌ಕುಮಾರ್, ಉಪೇಂದ್ರ ಮುಂತಾದವರು ಕನ್ನಡ ಚಲನಚಿತ್ರವನ್ನು ಶ್ರೀಮಂತಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು:**

1. ಸೂರ್ಯನಾಥ ಕಾಮತ, (2018), Concise History of Karnataka, ಬೆಂಗಳೂರು: ಅರ್ಚನಾ ಪ್ರಕಾಶನ.
2. ಸೂರ್ಯನಾಥ ಕಾಮತ, (2021), ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಬೆಂಗಳೂರು: ಎಂ.ಸಿ.ಸಿ. ಪಬ್ಲಿಕೇಷನ್ಸ್.
3. ರಮೇಶ್ ಬಿ.ಜಿ., (2014), ಕನ್ನಡ ನಾಡಿನ ಪ್ರಸಿದ್ಧ ಕವಿಗಳು, ಬೆಂಗಳೂರು: ಸಪ್ನ ಬುಕ್ ಹೌಸ್.
4. ಪುರುಷೋತ್ತಮ್ ಬಿಳಿಮಲೆ ಮತ್ತು ಮಹಮ್ಮದ್ ರಫಿಪಾಶ, (2015), ವರ್ತಮಾನ ಕರ್ನಾಟಕ, ಬೆಂಗಳೂರು: ಅಭಿನವ.